**OS No. 186/2023**
**ಪಿ.ಡಬ್ಲ್ಯೂ: 1**

**ದಿನಾಂಕ: 08-01-2026 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು ಪ್ರತಿವಾದಿಯ ಪರ: ಶ್ರೀ ಎಸ್. ಕೆ ವಕೀಲರಿಂದಃ</u>**

**1.** ವಾದಿ ನನ್ನ ಹೆಂಡತಿ. ವಾದಿ ರಾಯಚೂರಿನಲ್ಲಿ ಇರುತ್ತಾರೆ. ವಾದಿಯೇ ಈ ದಾವೆಯನ್ನು ಸಹಿ ಮಾಡಿ ಸಲ್ಲಿಸಿರುತ್ತಾರೆ ಎಂದರೆ ಸರಿ. ವಾದಿಗೆ ಲೋಬಿಪಿ ಇರುವುದರಿಂದ ಬರಲು ಆಗುವುದಿಲ್ಲ. ಸದರಿ ಲೋಬಿಪಿ ಕುರಿತಾಗಿ ದಾಖಲಾತಿಯನ್ನು ಹಾಕಿರುತ್ತೇನೆ. ಯಾವುದೇ ದಾಖಲಾತಿಯನ್ನು ಸಲ್ಲಿಸದೇ ಇದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ದೈಹಿಕ ಮತ್ತು ಮಾನಸೀಕವಾಗಿ ಆರೋಗ್ಯಕರವಾಗಿದ್ದರೂ ಕೂಡ ನ್ಯಾಯಲಯಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ನ್ಯಾಯಾಲಯಕ್ಕೆ ಬಂದರೆ ನಿಜ ಸಂಗತಿ ಹೊರ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**2.** ಸದರಿ ಗೋಡೆ ನಮ್ಮ ಜಮಿನಿನಲ್ಲಿ ಕಟ್ಟಿರುವುದನ್ನು ತೆರವುಗೊಳಿಸಲು ಹಾಕಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂಬರ 2 ಕ್ಷೇತ್ರ 1 ಎಕರೆ 30 ಗುಂಟೆ ಇರುತ್ತದೆ. ಸದರಿ ದಾವಾ ಆಸ್ತಿಯ ಉತ್ತರಕ್ಕೆ ನಿಲಗಲ್ಲ ಬಸವರಾಜಪ್ಪ ಇವರ ಜಮೀನು, ಪಶ್ಚಿಮಕ್ಕೆ ಕರೆ, ದಕ್ಷಿಣಕ್ಕೆ ಬೇರೆಯವರ ಜಮೀನು, ಪೂರ್ವಕ್ಕೆ ಸಿದ್ದಲಿಂಗಯ್ಯ ಸ್ವಾಮಿ ಇವರ ಜಮೀನು ಇದೆ. ದಾವಾ ಆಸ್ತಿಯ ಚಕಬಂದಿಯ ಮದ್ಯದಲ್ಲಿ ಇರುತ್ತದೆ ಎಂದು ತೋರಿಸಲು ದಾಖಲಾತಿಯನ್ನು ಸಲ್ಲಿಸಿರುತ್ತೇನೆ. ಸದರಿ ಈ ದಾವೆಯನ್ನು ಸಲ್ಲಿಸುವಾಗ ನಾನು ಹೇಳಿರುವ ಚಕಬಂದಿಯನ್ನು ಹಾಕಿರುತ್ತೇವೆ. ಯಾವುದೇ ಚಕಬಂದಿ ಮತ್ತು ಯಾವುದೇ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯ ಸರ್ವೆ ಆಗಿ ಅದರ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ. ಸದರಿ ಯಾವುದೇ ಸರ್ವೆ ಮಾಡಿಸಿಲ್ಲ, ಯಾವುದೇ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯು ಕೃಷಿ ಆಸ್ತಿ ಎಂದರೆ ಸರಿ. ನಾನೇ ಸಾಗುವಳಿ ಮಾಡುತ್ತೇನೆ. ನನ್ನ ಒಕ್ಕಲುತನ ಇದೆ. ಈ ವರ್ಷ ಸಜ್ಜೆ ಬೆಳೆ ಬೆಳೆದಿರುತ್ತೇವೆ. ಸನಃ 2023-2024 ರಲ್ಲಿ ತೊಗರಿ ಬೆಳೆ

ಇತ್ತು. ಸದರಿ ಪಹಣಿ ಪತ್ರಿಕೆಯಲ್ಲಿ ಯಾವುದೇ ಬೆಳೆ ಇರುವುದಿಲ್ಲ ಎಂದರೆ ಸಾಕ್ಷಿಯು ತೋರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಗುವಳಿ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯು ಊರಿಗೆ ಹತ್ತಿಕೊಂಡು ಇರುತ್ತದೆ ಎಂದರೆ ಸರಿ. ಸದರಿ ದಾವಾ ಆಸ್ತಿಯು ಅಸ್ತಿತ್ವದಲ್ಲಿ ಇಲ್ಲದೆ ಇದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಸದರಿ 27 ವರ್ಷದಿಂದ ಬೆಳಗುಂದಿ ಗ್ರಾಮಕ್ಕೆ ಬರುವುದು-ಹೋಗುವುದು ಮಾಡುತ್ತೇನೆ. ಸರಕಾರಿ ಶಾಲೆ ಇದೆ ಎಂದರೆ ಸರಿ. 10-11 ವರ್ಷದಿಂದ ಸರಕಾರಿ ಶಾಲೆ ಇರುತ್ತದೆ. ಸಾಕ್ಷಿಯು ಮುಂದುವರೆದು ಪ್ರತಿವಾದಿಯರು ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿಯರು ಎಷ್ಟು ಒತ್ತುವರಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸರ್ವೆ ಮಾಡಿದ ನಂತರ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. ಸದರಿ ದಾವೆ ಹೂಡುವುದಕ್ಕಿಂತ ಮುಂಚೆ ಸರ್ವೆ ಮಾಡಿದ ನಂತರ 15 ಗುಂಟೆ ಒತ್ತುವರಿ ಮಾಡಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ಸದರಿ 15 ಗುಂಟೆ ಒತ್ತುವರಿ ಮಾಡಿರುತ್ತಾರೆ ಎಂದು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ. ನಾನು 15 ಗುಂಟೆ ಒತ್ತುವರಿ ಮಾಡಿರುವುದನ್ನು ಬರೆಸಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸನಃ 2011 ರಲ್ಲಿ ವಾದಿಯು ಕಟ್ಟಡ ಸಲುವಾಗಿ ದಾವೆಯನ್ನು ಸಲ್ಲಿಸಿದ್ದರು. ಆವಾಗಲೂ ಕೂಡ ಪ್ರತಿವಾದಿಯರು ಒತ್ತುವರಿ ಮಾಡಿರುತ್ತಾರೆ. ಸದರಿ 2011 ರಲ್ಲಿ ಬುನಾದಿ ಹಾಕಿ ಕಟ್ಟಡ ಕಟ್ಟಲು ಪ್ರಯತ್ನಿಸಿರುತ್ತಾರೆ. ಅಸಲು ದಾವಾ 164/2011 ಆ ದಾವೆಯನ್ನು ಸಲ್ಲಿಸಿದಾಗ ಕಟ್ಟಡವನ್ನು ನಿಲ್ಲಿಸಿರುತ್ತಾರೆ. ಮರಳಿ ಮತ್ತೆ ಕಟ್ಟಡ ಕಟ್ಟಲು ಪ್ರಾರಂಬಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 6 ತಿಂಗಳ ಹಿಂದೆ ಮರಳಿ ಮತ್ತೆ ಕಟ್ಟಡ ಕಟ್ಟಲು ಪ್ರಾರಂಭಿಸಿರುತ್ತಾರೆ. ಸದರಿ ಅಸಲು ದಾವಾ ನಂಬರ 164/2011 ನಾವು ಮುಂದುವರೆಸಿರುವುದಿಲ್ಲ. ಸದರಿ ಪ್ರತಿವಾದಿಯರು ಕಟ್ಟಡ ಕಟ್ಟಲು ನಿಲ್ಲಿಸಿರುತ್ತಾರೆ ಆದ್ದರಿಂದ ಅಸಲು ದಾವಾ ನಂಬರ 164/2011 ನ್ನು ಮುಂದುವರೆಸಿರುವುದಿಲ್ಲ ಎಂದು ಬರೆಸಿರುತ್ತೇವೆ. ಸದರಿ ಅಸಲು ದಾವಾ ನಂಬರ 164/2011 ಸಾಕ್ಷಿ ನುಡಿಯದೇ ಕಾರಣ

ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕಟ್ಟಡ ಕಟ್ಟುವುದನ್ನು ಪ್ರತಿವಾದಿಯರು ನಿಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಕಟ್ಟಿದ ಕಟ್ಟಡವನ್ನು ನೆಲಸಮ ಮಾಡಲು ಈ ದಾವೆಯನ್ನು ಸಲ್ಲಿಸಿರುತ್ತೇವೆ. ಸುಮಾರು 6 ತಿಂಗಳ ಹಿಂದೆ ಕಟ್ಟಡ ಕಟ್ಟಲು ಪ್ರಾರಂಭಿದ್ದರ ಬಗ್ಗೆ ಫೋಟೊಗಳು ಇವೆ. ಈಗಿನ ಸದ್ಯದಲ್ಲಿ ಛಾವಣಿವರೆಗೆ ಕಟ್ಟಡ ಹೋಗಿರುತ್ತದೆ. ಸದರಿ ನನ್ನ ಪ್ರಮಾಣ ಪತ್ರದಲ್ಲಿ 6 ತಿಂಗಳ ಹಿಂದೆ ಕಟ್ಟಡ ಕಟ್ಟಿದ್ದರ ಬಗ್ಗೆ ಬರೆಸಿರುತ್ತೇನೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಬೆಳಗುಂದಿ ಗ್ರಾಮದಲ್ಲಿ ಸನಃ 2006-2007 ರಿಂದ 4 ಕೋಣೆಯ ಶಾಲೆ ಇರುತ್ತದೆ ಎಂದರೆ ಸರಿಯಲ್ಲ. 2011-2012 ರಲ್ಲಿ ಮತ್ತೆ 2 ಕೋಣೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸನಃ 2011 ರಲ್ಲಿ ತಕರಾರು ಮಾಡಿ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ನನ್ನ ಜಮಿನಿನಲ್ಲಿ ಶಾಲೆ ಕಟ್ಟಿದ್ದು ನಿಖರವಾಗಿ ಗೊತ್ತಾದ ನಂತರ ದಾವೆ ಸಲ್ಲಿಸಿರುತ್ತೇನೆ. ಸದರಿ ನನ್ನ ದಾವೆಯನ್ನು ಸಲ್ಲಿಸಿದಾಗ ಈಗಾಗಲೆ ಶಾಲೆಯನ್ನು 2011 ರಲ್ಲಿ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಶಾಲೆಯ ಸುತ್ತುವರಿದು ತಡೆಗೋಡೆ ಇದೆ ಎಂದರೆ ಸರಿ. ಸನಃ 2023 ರಲ್ಲಿ ಮದ್ಯಾಹ್ನ ಊಟದ ಕೋಣೆ ಮಂಜೂರು ಆಗಿರುತ್ತದೆ ಎಂದರೆ ಸಾಕ್ಷಿಯು ತಡೆಗೊಡೆ ಬಿಟ್ಟು ಹೊರಗಡೆ ಇರುತ್ತದೆ ಎಂದು ನುಡಿಯುತ್ತಾರೆ. ತಡೆಗೊಡೆ ಹೊರಗಡೆ ಕೋಣೆ ಕಟ್ಟಿದ್ದರ ಬಗ್ಗೆ ಫೋಟೊಗಳನ್ನು ಹಾಕಿರುತ್ತೇನೆ. ಸದರಿ ಕೋಣೆ ತಡೆಗೋಡೆ ಒಳಗಡೆ ಇದ್ದರೂ ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಯಾವುದೇ ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ಬಗ್ಗೆ ನಿಖರವಾಗಿ ಮಾಹಿತಿ ಇದ್ದರೂ ಕೂಡ ಅಂದಾಜು ಮೇಲೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಗೆ ವಾದಿಯೇ ಮಾಲೀಕ ಮತ್ತು ಕಬ್ಜೆದಾರ ಇರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ತಂದೆ ಮಾಲೀಕ ಇದ್ದರು ಎಂದರೆ ಸರಿಯಲ್ಲ. ಸದರಿ 2023 ರಲ್ಲಿ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರೇ ಕಟ್ಟಡ

ಕಟ್ಟಿದ್ದು ಅವರೇ ಮಾಲೀಕರು ಮತ್ತು ಕಬ್ಜೆದಾರರು ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ಬೆಳಗುಂದಿ ಗ್ರಾಮದಲ್ಲಿ ಜನರ ಮಾತು ಕೇಳಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**